# MODEL QUESTION PAPER
# KANNADA-PAPER II

**ಮಾದರಿ ಪ್ರಶ್ನೆ ಪತ್ರಿಕೆ** **ಅಂಕಗಳು:40**

**ತರಗತಿ:VIII** **ಕನ್ನಡ II** **ಸಮಯ:1 ಗಂಟೆ 30 ನಿಮಿಷ**

**ಸೂಚನೆಗಳು:**

- **ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳಲು ನಿಮಗೆ 15 ನಿಮಿಷ ಕಾಲಾವಕಾಶ ನೀಡಲಾಗಿದೆ.**
- **ಎಲ್ಲಾ ಪ್ರಶ್ನೆಗಳನ್ನು ಸಾವಧಾನವಾಗಿ ಓದಿರಿ.**
- **ಸೂಚನೆಗಳನ್ನು ಓದಿ ಅರ್ಥಮಾಡಿಕೊಂಡು ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.**

**1 ರಿಂದ 3 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ. 2*1=2**

1.'ಕುಡಿಯಬೇಡ'ಕವನದ ಈ ಕೆಳಗಿನ ಸಾಲುಗಳು ಯಾವ ಆಶಯವನ್ನು ವ್ಯಕ್ತಪಡಿಸುತ್ತವೆ?

ಮಧ್ಯರಹಿತ ದುಡಿತದಿಂದ

ಹಸನು ಬಾಳ ಸಹಜಗುಟ್ಟ

(ಸುಖ ಜೀವನ,ದುಃಖ ಜೀವನ,ಕಷ್ಟದ ಜೀವನ,ದುರಂತ ಜೀವನ)

2'ನಾ ಕಂಡ ಆಸ್ಟ್ರೇಲಿಯಾ' ಪಾಠ ಭಾಗವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

( ಲಲಿತ ಪ್ರಬಂಧ,ಕಥೆ,ಪ್ರವಾಸ ಕಥನ,ಕವನ )

3. 'ನೇಗಡಿ' ಪಾಠ ಭಾಗಕ್ಕೆ ಬೇರೊಂದು ಶೀರ್ಷಿಕೆ ನೀಡಿರಿ.

**4 ರಿಂದ 7 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸಿರಿ. 3*2=6**

4. ಅಡಿಗೆರೆ ಎಳೆದ ಆಂಗ್ಲ ಪದಕ್ಕೆ ಸಂವಾದಿಯಾದ ಕನ್ನಡ ಪದವನ್ನು ಬಳಸಿ ಬೇರೊಂದು ವಾಕ್ಯ ಬರೆಯಿರಿ.

ತನ್ನ ಕುಟುಂಬದ ನೋವು ನಲಿವುಗಳನ್ನು ಬದಿಗಿರಿಸಿ ರೋಗಿಯ ಪ್ರಾಣ ಉಳಿಸಲು ಡಾಕ್ಟರ್ ಗಳು ಹರಸಾಹಸ ಪಡುತ್ತಾರೆ.

5.ಕೆಳಗೆ ಕೊಡಲಾದ ವಾಕ್ಯವನ್ನು ಶಿಷ್ಟ ರೂಪದಲ್ಲಿ ಬರೆಯಿರಿ.

ಬ್ಯಾಸಿಗೆ ರಜೇಲಿ ಪ್ಯಾಟೆಯಿಂದ ಅಳ್ಳೀಲಿದ್ದ ಅಜ್ಜನ ಮನಿಗೆ ಬಂದ ಮೊಮ್ಮಗಅಳ್ಳಿ,ತೋಟಾ,ಹೊಲನ್ನೆಲ್ಲಾ ಸುತ್ಕೊಂಡು ಬಂದ.

6 ಕೆಳಗೆ ಕೊಡಲಾದ ಸಂಯುಕ್ತ ವಾಕ್ಯವನ್ನು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ಜಮೀನಿನಲ್ಲಿ ಕತ್ತೆಯೊಂದು ಕರ್ಕಶವಾಗಿ ಅರಚುತ್ತಿರುವುದನ್ನು ಕೇಳಿದ ಯಜಮಾನನು ತಟ್ಟನೆ ತನ್ನ ನಿದ್ದೆಯಿಂದ ಎಚ್ಚೆತ್ತನು.

7. 'ಕುಡಿಯಬೇಡ' ಕವನದ ಈ ಕೆಳಗಿನ ಸಾಲುಗಳ ಸ್ವಾರಸ್ಯ ಬರೆಯಿರಿ .

ಮಧ್ಯಕಿಂದೆ ಮುಚ್ಚು ಬಾಯ

ಸುಖದ ಬಾಳ್ವೆಗಿದುವೆ ನ್ಯಾಯ

© State Assessment Cell SCERT , Kerala

**8 ರಿಂದ 13 ರವರೆಗಿನ ಪ್ರಶ್ನೆಗಳಲ್ಲಿ  ಯಾವುದಾದರೂ 5 ಪ್ರಶ್ನೆಗಳಿಗೆ ಉತ್ತರಿಸಿರಿ.        5*4=20**

8.ವೈದ್ಯವಿದ್ಯೆ ಇಷ್ಟು ಮುಂದುವರಿದರೂ ನೆಗಡಿಗೆ ಇನ್ನೂ ಮದ್ದು ಸಿದ್ಧವಾಗಿಲ್ಲ–ನೆಗಡಿ ಪಾಠ ಭಾಗದಲ್ಲಿ ಲೇಖಕರು ಹೇಳಿದ ಈ ಮಾತನ್ನು ವಿಶ್ಲೇಷಿಸಿ ನೆಗಡಿಯಿಂದ ಲೇಖಕರು ಅನುಭವಿಸಿದ ಸಮಸ್ಯೆಗಳನ್ನು ಪಾಠದ ಆಧಾರದಲ್ಲಿ ಬರೆಯಿರಿ.

9.'ಕುಡಿಯಬೇಡ' ಕವನದಲ್ಲಿ ಮದ್ಯಪಾನದ ದುಷ್ಪರಿಣಾಮಗಳ ಕುರಿತು ಓದಿರುವಿರಲ್ಲವೇ? ಅದೇ ಆಶಯವಿರುವ 'ಸರ್ವಜ್ಞನ ತ್ರಿಪದಿ' ಗಳನ್ನು ಕೆಳಗೆ ನೀಡಲಾಗಿದೆ.ಇದರ ಆಶಯವನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಬರೆಯಿರಿ.

ಮದ್ಯಪಾನವ ಮಾಡಿ ।
ಇದ್ದುದೆಲ್ಲವ ನೀಗಿ ।
ಬಿದ್ದು ಬರುವವನ ಸದ್ದಡಗಿ ಸಂತಾನ |
ವೆದ್ದು ಹೋಗುವುದು ಸರ್ವಜ್ಞ ||

ಸುರೆಯ ಸೇವಿಸುವವನ | ಸುರಿಗೆಯನು ಪಿಡಿದವನ |
ದೊರೆಯೊಲುಮೆಗಾಗಿ ಹೆಣಗುವನ ಕಾಯುವದು |
ಸೊರಗಿ ಸಾಯುವದು ಸರ್ವಜ್ಞ ||

( ಹೆಣಗು–ಕಷ್ಟಪಡು     ಸೊರಗು–ಕೊರಗು      ಸುರಿಗೆ–ಸಣ್ಣಕತ್ತಿ)

10.ಮಾದಕ ವಸ್ತುವಿನಿಂದ ದೂರವಿರುವುದೇ ಅತ್ಯಂತ ಸುರಕ್ಷಿತವಾದದ್ದು. ಜೇಡನ ಬಲೆ ಅಂದಕ್ಕೆ ಆಕರ್ಷಿತಗೊಂಡು ಸಾಯುವ ಹುಳು ನಮಗೆ ಪಾಠವಾಗಬೇಕು. ಮದ್ಯಪಾನವಾಗಲೀ ಮಾದಕ ವಸ್ತುವಾಗಲೀ ನೀಡುವ ಪ್ರಾರಂಭಿಕ ಸುಖದ ಆಕರ್ಷಣೆಗೆ ಒಳಗಾದರೆ , ನಮ್ಮ ಸ್ಥಿತಿ ದುರಂತವಾಗುತ್ತದೆ–'ಭ್ರಮಾಧೀನ 'ಪಾಠ ಭಾಗದ ಈ ಸಾಲುಗಳ ಆಧಾರದಲ್ಲಿ ಜನಜಾಗೃತಿ ಮೂಡಿಸಲು ಕರಪತ್ರವೊಂದನ್ನು ತಯಾರಿಸಿ.

11. ಡಾ.ಕೆ.ಕಮಲಾಕ್ಷರು ಬರೆದ ' ನಾ ಕಂಡ ಆಸ್ಟ್ರೇಲಿಯಾ' ಪ್ರವಾಸ ಕಥನದಲ್ಲಿ ಶುಚಿತ್ವಕ್ಕೆ ಆಸ್ಟ್ರೇಲಿಯನ್ನರು ನೀಡುವ ಪ್ರಾಶಸ್ತ್ಯವನ್ನು ತಿಳಿದುಕೊಂಡಿರುವೆವು. ಇದರ ಆಧಾರದಲ್ಲಿ ಆರೋಗ್ಯ ಮತ್ತು ಶುಚಿತ್ವದ ಕುರಿತು ಕಿರು ಲೇಖನ ಬರೆಯಿರಿ.

12 .ಕೆಳಗೆ ನೀಡಲಾದ ಗದ್ಯಭಾಗವನ್ನು ಸಂಕ್ಷೇಪಿಸಿ ಬರೆಯಿರಿ.

ಹವ್ಯಾಸಗಳು ವ್ಯಕ್ತಿಯ ಜೀವನವನ್ನು ಸಂತೋಷಮಯ ಮತ್ತು ಅರ್ಥಪೂರ್ಣವಾಗಿಸಲು ಸಹಾಯ ಮಾಡುತ್ತವೆ .ಪ್ರತಿಯೊಬ್ಬರೂ ತಮ್ಮ ಆಸಕ್ತಿಗಳಿಗೆ ಅನುಗುಣವಾಗಿ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಅವುಗಳನ್ನು ಜೀವನದ ಭಾಗವಾಗಿ ಮಾಡಿಕೊಳ್ಳಬೇಕು. ಹವ್ಯಾಸಗಳು ವ್ಯಕ್ತಿಯ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ .ಬಿಡುವಿನ ವೇಳೆಯನ್ನು ಆನಂದದಾಯಕವಾಗಿ ಕಳೆಯಲು ಹವ್ಯಾಸಗಳು ಸಹಾಯ ಮಾಡುವುದಲ್ಲದೆ ಹೊಸ ವಿಷಯಗಳನ್ನು ಕಲಿಯಲು ಮತ್ತು ವ್ಯಕ್ತಿಯ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತವೆ .ದೈಹಿಕ ಹವ್ಯಾಸಗಳು, ಮಾನಸಿಕ

© State Assessment Cell SCERT, Kerala

ಹವ್ಯಾಸಗಳು ,ಸೃಜನಶೀಲ ಹವ್ಯಾಸಗಳು, ಸಂಗೀತದ ಹವ್ಯಾಸಗಳು ಹೀಗೆ ಹವ್ಯಾಸಗಳಲ್ಲಿ ವಿವಿಧ ಪ್ರಕಾರಗಳಿವೆ .ಹವ್ಯಾಸ ಎನ್ನುವುದು ಜೀವನೋಪಾಯಕ್ಕಾಗಿ ಅಲ್ಲ ; ಅದು ಆತ್ಮ ಸಂತೋಷಕ್ಕಾಗಿ ಮಾಡುವ ಕೆಲಸ –ಇದು ಬೀಚಿಯವರು ಹವ್ಯಾಸಕ್ಕೆ ನೀಡಿದ್ದ ವ್ಯಾಖ್ಯಾನ. ಬದುಕನ್ನು ಆಸಕ್ತಿದಾಯಕವನ್ನಾಗಿ ಮಾಡಲು ಸದಾ ಕ್ರಿಯಾಶೀಲರಾಗಿರಲು ಹವ್ಯಾಸ ಪೂರಕ .ನಮ್ಮ ದಿನನಿತ್ಯದ ಚಟುವಟಿಕೆ ,ಕೆಲಸ ಕಾರ್ಯಗಳು, ಕ್ರೀಡೆ ,ಆಹಾರ –ವಿಹಾರ ಇವೆಲ್ಲದರ ಜೊತೆಗೆ ಉತ್ತಮ ಹವ್ಯಾಸಗಳು ಜೊತೆಗೂಡಿದರೆ ನಾವು ನಮ್ಮ ಜೀವನವನ್ನು ಸಂತೋಷದಿಂದ ಸುಂದರವಾಗಿ ಕಳೆಯಲು ಸಾಧ್ಯ. ಉತ್ತಮ ಹವ್ಯಾಸಗಳು ನಮ್ಮ ಜೀವನಕ್ಕೆ ಉತ್ತಮ ಅಡಿಪಾಯವನ್ನು ಹಾಕಿಕೊಡುತ್ತವೆ.ಒಬ್ಬ ವ್ಯಕ್ತಿಯ ಸರ್ವತೋಮುಖ ಅಭಿವೃದ್ಧಿಗೆ ಉತ್ತಮ ಹವ್ಯಾಸಗಳು ಪೂರಕವಾಗಿದೆ.

13.ಆಯುರ್ವೇದ ಔಷಧೋತ್ಪನ್ನಗಳನ್ನು ನಿಮ್ಮ ಊರಿನಲ್ಲಿ ಮಹಿಳಾ ಸಂಘದವರು ಮಾರಾಟ ಮಾಡಲಿದ್ದಾರೆ ಎಂದು ಭಾವಿಸಿ ಕೊಳ್ಳಿ.ಇದರ ಪ್ರಚಾರಕ್ಕಾಗಿ ಒಂದು ಜಾಹೀರಾತು ತಯಾರಿಸಿರಿ.

**14 ರಿಂದ 16 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ. 2*6=12**

14. 'ಆರೋಗ್ಯ ಸಂಪತ್ತು ' ಘಟಕದಲ್ಲಿ ಆಧುನಿಕ ಆಹಾರ ಸೇವನೆಯು ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಕುರಿತು ಓದಿ ತಿಳಿದಿರುವಿರಿ. ಇದರ ಆಧಾರದಲ್ಲಿ 'ಆಧುನಿಕ ಆಹಾರ ಪದ್ಧತಿ ಮತ್ತು ಆರೋಗ್ಯ ಸಮಸ್ಯೆಗಳು' ಎಂಬ ವಿಷಯದ ಕುರಿತು ಲಿಖಿತ ಭಾಷಣವನ್ನು ತಯಾರಿಸಿರಿ.

15.'ಭ್ರಮಾಧೀನ' ಕಥೆಯಲ್ಲಿ ಮಾದಕ ವಸ್ತುಗಳ ಬಳಕೆಯಿಂದ ಯೋಗೀಶನು ಬುದ್ಧಿ ಭ್ರಮಣೆಗೆ ಒಳಗಾದುದನ್ನು ಓದಿ ತಿಳಿದಿರುವಿರಿ.ಇದರ ಆಧಾರದಲ್ಲಿ

ಮಾದಕ ವ್ಯಸನ,ಪರಿಣಾಮ ಮತ್ತು ತಡೆಗಟ್ಟುವಿಕೆಯ ಕುರಿತು ಪ್ರಬಂಧವೊಂದನ್ನು ಬರೆಯಿರಿ

16 'ನಾ ಕಂಡ ಆಸ್ಟ್ರೇಲಿಯಾ ' ಪಾಠದಲ್ಲಿ ಲೇಖಕರ ಪ್ರವಾಸದ ಅನುಭವಗಳನ್ನು ಓದಿ ತಿಳಿದಿರುವಿರಿ.ಈ ಹಿನ್ನೆಲೆಯಲ್ಲಿ ನೀವು ಕೈಗೊಂಡ ಯಾವುದಾದರೂ ಒಂದು ಪ್ರವಾಸದ ಅನುಭವಗಳನ್ನು ವಿವರಿಸುತ್ತಾ ನಿಮ್ಮ ಗೆಳೆಯ/ಗೆಳತಿಗೆ ಪತ್ರವೊಂದನ್ನು ಬರೆಯಿರಿ.

***

© State Assesment Cell SCERT, Kerala